**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-233/2003 **PW**-1

**ದಿಃ 24.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 10 ರಿಂದ 12 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

**5.** ಶ್ರೀ ಸಿ ವಿ ರಟ್ಟಿಹಳ್ಳಿ ವಕೀಲರು ಬೆನಕಟ್ಟಿ ಕುಟುಂಬದಿಂದ ಮೊಕ್ತಿಯಾರ ಪತ್ರವನ್ನು ಪಡೆದು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು 2001 ರಲ್ಲಿ ಗೊತ್ತಾಗಿರುತ್ತದೆ ಎನ್ನುತ್ತಾರೆ. ನನ್ನ ಪ್ರಕಾರ ದಾವಾ ಆಸ್ತಿಗಳು ಎರಡು ಇರುತ್ತವೆ. ಅವುಗಳ ನಂಬರ ಏನೆಂದರೆ ಸಾಕ್ಷಿಯು 623/4/ಸಿ, 2 ಎಕರೆ 1/2 ಗುಂಟೆ ಹಾಗೂ 627/3, 4 ಎಕರೆ 10 ಗುಂಟೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 14 ನ್ನು ತೋರಿಸಿ ಅದರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು ದಾಖಲೆ ನೋಡಿ 14 ಗುಂಟೆ ಇರುತ್ತದೆಂದು ನುಡಿಯುತ್ತಾರೆ. ನಿಪಿ 15 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಸಾಕ್ಷಿಯು 2 ಎಕರೆ ಇರುತ್ತದೆ ಎನ್ನುತ್ತಾರೆ. ನಾನು ಆದರಿಸಿರುವ ಕ್ರಯ ಕರಾರು ಪತ್ರದಲ್ಲಿ ಇರುವ ವಿಸ್ತೀರ್ಣವು 6 ಎಕರೆ 10.1/2 ಗುಂಟೆ ಇರುತ್ತದೆ. 6 ಎಕರೆ 10.1/2 ಗುಂಟೆಗೆ ಸಂಬಂದಿಸಿದಂತೆ ತಾವು ಉತಾರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಹಾಕುವ ಸಮಯದಲ್ಲಿ ಹಾಗೂ ಇಲ್ಲಿಯವರೆಗೂ ನಾನು ಆಧರಿಸಿರುವ ಕ್ಷೇತ್ರಕ್ಕೆ ಸಂಬಂದಿಸಿದಂತೆ ಉತಾರಗಳನ್ನು ಹಾಜರುಪಡಿಸಲು ಯಾವದೇ ತೊಂದರೆ ಇರುವದಿಲ್ಲ.

6. ದಾವಾ ಹಾಕುವ ಸಮಯದಲ್ಲಿ ದಾವಾ ಆಸ್ತಿಯು ಕೃಷಿ ಜಮೀನಾಗಿ ಉಳಿದಿರಲಿಲ್ಲ ಎಂದರೆ ಸಾಕ್ಷಿಯು ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ. ದಾಖಲೆಗಳಲ್ಲಿ ಬಿನ್ ಶೇತ್ಕಿ ಎಂದು ನಮೂದಾಗಿದೆ ಎಂದರೆ ಸರಿ. ಬಿನ್ ಶೇತ್ಕಿ ಎಂದು ನಮೂದಾಗಿರುವ ಉತಾರಗಳನ್ನು ತಾವು ದಾವಾ ಹಾಕುವ ಸಮಯದಲ್ಲಿಯೇ ಹಾಜರುಪಡಿಸಿರುತ್ತೀರಿ ಎಂದರೆ ಸರಿ. ಅಸಲರ್ಜಿಯಲ್ಲಿ ದಾವಾ ಆಸ್ತಿಯ ಸ್ವರೂಪ ಬದಲಾದ ಬಗ್ಗೆ ಹಾಗೂ ಆದ ಬೆಳವಣಿಗೆಗಳ ಬಗ್ಗೆ ಉಲ್ಲೇಖಿಸಿಲ್ಲ ಎಂದರೆ ಸರಿ. ತಾವು ಪರಿಹಾರ ಕೇಳುತ್ತಿರುವ 6 ಎಕರೆ 10.1/2 ಗುಂಟೆಯಲ್ಲಿ ಈಗ ಸಾಕಷ್ಟು ಜನ ಮಾಲೀಕರು ಇರುತ್ತಾರೆಂದರೆ ಸರಿ. ಸಂಪೂರ್ಣ ಉತಾರಗಳನ್ನು ಹಾಜರುಪಡಿಸಿದರೆ ದಾವಾ ಆಸ್ತಿಯಲ್ಲಿ ಯಾರೆಲ್ಲಾ ಮಾಲೀಕರು

ಇರುತ್ತಾರೆಂಬ ಬಗ್ಗೆ ಗೊತ್ತಾಗುತ್ತದೆಂದರ ಸರಿ. 2003 ರ ಪೂರ್ವದಲ್ಲಿ ದಾವಾ ಆಸ್ತಿಯು ಮಾರಾಟವಾಗಿ ಖರೀದಿದಾರರ ಹೆಸರುಗಳು ಉತಾರದಲ್ಲಿ ಬಂದಿರುತ್ತವೆಂದರೆ ಸಾಕ್ಷಿಯು 2001 ರಲ್ಲಿ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ. 2001 ರಲ್ಲಿ ಖರೀದಿ ಮಾಡಿದವರನ್ನು ಇಲ್ಲಿಯವರೆಗೂ ತಾವು ಪಕ್ಷಗಾರರಾಗಿ ಮಾಡಿರುವದಿಲ್ಲ ಎಂದರೆ ಸರಿ.

7. ನಾನು ಬೆನಕಟ್ಟಿ ಕುಟುಂಬದವರು ಮೊಕ್ತಿಯಾರ ಪತ್ರವನ್ನು ನನಗೆ ಕೊಟ್ಟಿದ್ದಾರೆಂದು ಕ್ಲೇಮ ಮಾಡುತ್ತಿದ್ದೇನೆ. ತಾವು ಮೊಕ್ತಿಯಾರ ಪತ್ರದ ಪ್ರಕಾರ ಯಾವದಂಾದಾ ಕಾರ್ಯಗಳನ್ನು ಮಾಡಿದ್ದರ ಬಗ್ಗೆ ಯಾವದಾದರೂ ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಆಸ್ತಿಗೆ ಸಂಬಂದಿಸಿದಂತೆ ಗೌ. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕೀ ಇದ್ದ ಕಾರಣ ನಾನು ಯಾವದೇ ಕೆಲಸ ಮಾಡುವಂತೆ ಇರಲಿಲ್ಲ ಎನ್ನತ್ತಾರೆ. ಗೌ .ಉಚ್ಚ ನ್ಯಾಯಾಲಯದಲ್ಲಿ ಯಾವ ವರ್ಷದಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿಯು ನಾನು ಅಗ್ರಿಮೆಂಟ ಮಾಡಿಕೊಂಡಾಗ ಕೇಸು ಇತ್ತು ಎನ್ನುತ್ತಾರೆ. ಗೌ. ಉಚ್ಚ ನ್ಯಾಯಾಲಯದಲ್ಲಿ ಬೆನಕಟ್ಟಿ ರವರು ಯಾವದೇ ಆಸ್ತಿಯನ್ನು ಮಾರಾಟ ಮಾಡಬಾರದೆಂಬ ಆದೇಶವಾಗಿತ್ತು ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ಪಕ್ಷಗಾರನಾಗಿರಲಿಲ್ಲ. ಗೌ. ಉಚ್ಚ ನ್ಯಾಯಾಲಯದಲ್ಲಿ ಬೆನಕಟ್ಟಿ ರವರಿಗೆ ಯಾವದೇ ಆಸ್ತಿಯನ್ನು ಮಾರಾಟ ಮಾಡಬಾರದು ಎಂಬ ಆದೇಶ ಇದ್ದರೂ ತಾವು ಈ ಸುಳ್ಳುದಾಖಲೆಯನ್ನು ಸೃಷ್ಟೀಸಿರುತ್ತೀರಿ ಎಂದರೆ ಸರಿಯಲ್ಲ. ತಾವು ಆಧರಿಸಿರುವ ಖರೀದಿ ಸಂಚಗಾರ ಪತ್ರ ಆಗುವ ಪೂರ್ವದಲ್ಲಿಯೇ ಮದ್ಯಂತರ ಆದೇಶ ಇದ್ದು ಗೌ. ಉಚ್ಚನ್ಯಾಯಾಲಯದಲ್ಲಿ ಪ್ರಕರಣವು 1999 ರಲ್ಲಿ ಮುಕ್ತಾಯಗೊಂಡಿರುತ್ತದೆಂದರೆ ಸರಿ. ನಿಖಾಲಿಯಾಗುವವರೆಗೂ ಮದ್ಯಂತರ ಆದೇಶವು ಚಾಲ್ತಿಯಲ್ಲಿತ್ತು ಎಂದರೆ ಸರಿ. ತಾವು ಆಧರಿಸಿರುವ ಸಂಚಗಾರ ಪತ್ರವನ್ನು ಹಾಗೂ ಮೊಕ್ತಿಯಾರ ಪತ್ರವನ್ನು ಬೆನಕಟ್ಟಿ ರವರು ತಮಗೆ ಯಾವದೇ ಸಮಯದಲ್ಲಿಯೂ ಬರೆದುಕೊಡದಿದ್ದರೂ ಆಸ್ತಿಗಳ ಮೌಲ್ಯವು ಹೆಚ್ಚಾಗಿರುವ ಕಾರಣ ಅದನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಕಾಗದ ಪತ್ರಗಳನ್ನು ಸೃಷ್ಟೀಸಿರುತ್ತೀರಿ ಎಂದರೆ ಸರಿಯಲ್ಲ. 6 ಎಕರೆ 10.1/2 ಎಕರೆಯಲ್ಲಿ ಕೆಲವೊಂದು ಭಾಗವನ್ನು ಏರಪೋರ್ಟ ಅಥಾರಿಟಿಯವರು ಸ್ವಾದೀನಪಡಿಸಿಕೊಂಡು ಪರಿಹಾರವನ್ನು ಸಹ 10 ರಿಂದ 12ನೇ ಪ್ರತಿವಾದಿಯಾಗೆ ಕೊಟ್ಟಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಅದು ನಂತರ ಬೆಳವಣಿಗೆ ಎನ್ನುತ್ತಾರೆ. ಸ್ವಾದೀನಪಡಿಸಿಕೊಂಡ ಪ್ರಕ್ರಿಯೇಯನ್ನು ಪ್ರಶ್ನಿಸಿ ಹಾಗೂ ಪರಿಹಾರ ಸಂದಾಯ ಮಾಡಿದ ಕ್ರಮವನ್ನು ಪ್ರಶ್ನಿಸಿ ಯಾವದೇ ನ್ಯಾಯಾಲಯದಲ್ಲಿ ದಾವೆ ಮಾಡಿಲ್ಲ ಹಾಗೂ ಸಂಬಂದಪಟ್ಟ ಮೇಲ್ಮನವಿ ಪ್ರಾದಿಕಾರದ ಮುಂದೆ ರಿಟ್ ಅರ್ಜಿಗಳನ್ನು ಸಲ್ಲಿಸಿರುವದಿಲ್ಲ ಸಾಕ್ಷಿ ಮುಂದುವರೆದು ಪತ್ರ ವ್ಯವಹಾರ ಮಾಡಿರುತ್ತೇನೆ ಎನ್ನುತ್ತಾರೆ. ಪತ್ರ ವ್ಯವಹಾರ ಮಾಡಿದ ಬಗ್ಗೆ ದಾಖಲೆಯುನ್ನು ನ್ಯಾಯಾಲಯಕ್ಕೆ

ಕೊಟ್ಟಿರುವದಿಲ್ಲ. ತಾವು ಯಾವದೇ ಪರಿಹಾರಕ್ಕೆ ಅರ್ಹರಲ್ಲದಿದ್ದರೂ ಸುಳ್ಳು ದಾವೆಯನ್ನು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.